ಮೈಸೂರು ಜಿಲ್ಲೆಯಲ್ಲಿ ದಾಖಲಾಗಿರುವ ಕಾರ್ಮಿಕರ ಪ್ರಕರಣಗಳು

2220 (2570) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 11/10/1999ರ ನಂತರ ಮೈಸೂರು ಜಿಲ್ಲೆಯಲ್ಲಿ ದಾಖಲಾದ ಕಾರ್ಮಿಕರ ಪ್ರಕರಣಗಳು ಎಷ್ಟು; ಇದರಲ್ಲಿ ಕಾರ್ಮಿಕ ಅಸಂತುಷ್ಟಿ ಪ್ರಕರಣಗಳು ಎಷ್ಟು;

ಆ) ಕಾರ್ಮಿಕ ವಿವಾದದ ಕಾರಣ ಮುಚ್ಚಿರುವ ಕೈಗಾರಿಕೆಗಳು ಯಾವುವು; ರೋಗಗ್ರಸ್ತವಾಗಿರುವುದು ಯಾವುವು;

ಇ) ಇದನ್ನು ತಪ್ಪಿಸಲು ಕೈಗೊಂಡಿರುವ ಕ್ರಮವೇನು; ಕಾರ್ಮಿಕ ಪ್ರಕರಣ ಉದ್ಭವಿಸಲು ಮಾಲೀಕರೊಡನೆ ಶಾಮೀಲಾಗಿರುವ ಅಧಿಕಾರಿಗಳು ಯಾರು; ಇವರ ತೀರ್ಮಾನದಿಂದ ಉದ್ದಿಮೆ ನಷ್ಟಕ್ಕೆ ಗುರಿಯಾಗುತ್ತಿದೆ ಎಂಬ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ಕಾರ್ಮಿಕ ಪ್ರಕರಣ ಉದ್ಭವಿಸಲು ಕಾರಣವಾಗಿರುವ ಅಧಿಕಾರಿಗಳು ಯಾರು; ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) 693 ಪ್ರಕರಣಗಳು. ಎಲ್ಲಾ ಪ್ರಕರಣಗಳು ಕಾರ್ಮಿಕರ ಅಸಂತುಷ್ಟಿ ಪ್ರಕರಣಗಳಾಗಿರುತ್ತವೆ.

ಆ) ಈ ಕೆಳಗೆ ತಿಳಿಸಿದಂತೆ ಒಂದು ಕೈಗಾರಿಕಾ ಸಂಸ್ಥೆಯು ಕಾರ್ಮಿಕರ ವಿವಾದದಿಂದ ಮುಚ್ಚಿದೆ ಮತ್ತು ಇನ್ನೊಂದು ಕೈಗಾರಿಕಾ ಸಂಸ್ಥೆಯು ರೋಗಗ್ರಸ್ತವಾಗಿದೆ.

1) ರಾಮಕೃಷ್ಣ ನರ್ಸಿಂಗ್ ಹೋಂ, ಮೈಸೂರು (ಮುಚ್ಚಿದೆ)

2) ಮೈಸೂರು ಪ್ಯಾನಲ್ ಅಂಡ್ ಬೋರ್ಡ್, ನಂಜನಗೂಡು (ರೋಗಗ್ರಸ್ತವಾಗಿದೆ)

ಇ) ಕೈಗಾರಿಕಾ ವಿವಾದಗಳನ್ನು ಸಂಧಾನದ ಮೂಲಕ ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಒಪ್ಪಂದ ಏರ್ಪಡಿಸಿ, ಇತ್ಯರ್ಥಪಡಿಸಿದೆ ಮತ್ತು ಸಂಧಾನ ವಿಫಲಗೊಂಡ ಪ್ರಕರಣಗಳನ್ನು ನ್ಯಾಯನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಗಳಿಗೆ ಒಪ್ಪಿಸಲಾಗಿದೆ. ಯಾವುದೇ ಅಧಿಕಾರಿಯು ಮಾಲೀಕರೊಂದಿಗೆ ಶಾಮೀಲಾದ ಕಾರಣ ಉದ್ದಿಮೆ ನಷ್ಟವಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅಕ್ರಮ ಜಮೀನು ಸಕ್ರಮೀಕರಣಗೊಳಿಸಲು ಅರ್ಜಿ ಸಲ್ಲಿಸಲು ಅವಕಾಶ ನೀಡುವ ಬಗ್ಗೆ

2221 (2366) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ ಜಮೀನು ಸಕ್ರಮೀಕರಣಗೊಳಿಸುವ ಬಗ್ಗೆ ಅರ್ಜಿ ಸಲ್ಲಿಸಲು ಬಹಳಷ್ಟು ಗ್ರಾಮಸ್ಥರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಅರ್ಜಿ ಸಲ್ಲಿಸಲು ವಂಚಿತರಾದ ಗ್ರಾಮಸ್ಥರಿಗೆ ಇನ್ನೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವುದೇ;

ಇ) ನೀಡುವುದಾದಲ್ಲಿ ಯಾವ ದಿನಾಂಕದಿಂದ ಎಲ್ಲಿಯವರೆಗೆ ಅವಕಾಶ ಕಲ್ಪಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ)

ಆ) ಈ ಬಗ್ಗೆ ಸರ್ಕಾರಕ್ಕೆ ಬಂದಿರುವ ಮನವಿ ಪರಿಶೀಲನೆಯಲ್ಲಿಟ್ಟಿದೆ.

ಇ)

ಗ್ರಾಮ ಸಹಾಯಕರನ್ನು 'ಡಿ' ದರ್ಜೆ ನೌಕರರೆಂದು ಪರಿಗಣಿಸಿ ಆದೇಶ

2222 (2367) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಗ್ರಾಮ ಸಹಾಯಕರಾಗಿ ದುಡಿಯುತ್ತಿರುವ ನೌಕರರ ಸಂಖ್ಯೆ ಎಷ್ಟು;

ಆ) ಸದರಿ ನೌಕರರನ್ನು 'ಡಿ' ದರ್ಜೆ ನೌಕರರೆಂದು ಪರಿಗಣಿಸಲು ಮಾನ್ಯ ನ್ಯಾಯಾಲಯ ತೀರ್ಪು ನೀಡಿದೆಯೇ; ಹಾಗಾದಲ್ಲಿ ಯಾವಾಗಿನಿಂದ ಗ್ರಾಮ ಸಹಾಯಕರನ್ನು 'ಡಿ' ದರ್ಜೆ ನೌಕರರೆಂದು ಪರಿಗಣಿಸಿ ಆದೇಶ ಹೊರಡಿಸಲಾಗುವುದು;

ಇ) ಗ್ರಾಮ ಸಹಾಯಕರಿಗೆ ವಿಳಂಬವಾಗಿ ವೇತನ ಪಾವತಿಸಲು ಕಾರಣವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಕಂದಾಯ ಇಲಾಖೆಯಲ್ಲಿ ಒಟ್ಟು 9665 ಗ್ರಾಮ ಸಹಾಯಕರು ಸೇವೆ ಸಲ್ಲಿಸುತ್ತಿದ್ದಾರೆ.

ಆ) ಗ್ರಾಮ ಸಹಾಯಕರ ಸೇವಾ ವಿಷಯ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ.

ಇ) ಸಂಭಾವನೆ ಪಾವತಿ ಮಾಡಲು ವಿಳಂಬ ಆಗುತ್ತಿಲ್ಲ. ಆದಾಗ್ಯೂ ಆಡಳಿತಾತ್ಮಕ ಕಾರಣದಿಂದ ಅನುದಾನ ತಡವಾಗಿ ಬಿಡುಗಡೆ ಆದಾಗ ಮಾತ್ರ ವಿಳಂಬ ಆಗುತ್ತದೆ.

ಸಿ.ಆರ್. ಜಡ್‌ಗೆ ಸಂಬಂಧಪಟ್ಟಂತೆ ಕರಾವಳಿಯಲ್ಲಿ ವಲಯಗಳನ್ನು ವಿಭಾಗಿಸುವುದು

2224 (2369) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿ.ಆರ್. ಜಡ್ ಬಗ್ಗೆ ಕರಾವಳಿ ಪ್ರದೇಶದ ಜನರಲ್ಲಿ ಇರುವ ಭೀತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಲ್ಲಿ ಈ ಬಗ್ಗೆ ಯಾವ ಕ್ರಮ ಸರ್ಕಾರ ಕೈಗೊಂಡಿದೆ;

ಇ) ಸಿ.ಆರ್. ಜಡ್‌ಗೆ ಸಂಬಂಧಿಸಿದಂತೆ ಕರಾವಳಿ ಪ್ರದೇಶದಲ್ಲಿ ವಲಯಗಳನ್ನು ವಿಭಾಗಿಸಿ ಜನರಿಗೆ ವಲಯಗಳನ್ನು ಗುರುತಿಸಲು ಅನುಕೂಲವಾಗುವಂತೆ ನಾಮಫಲಕಗಳನ್ನು ಹಾಕಲಾಗುವುದೆ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು